| |
|---|
| **Deposition Sheets (RP.No.57) Form No.4** |

**IN THE COURT OF ADDL. CIVIL JUDGE & J.M.F.C., KUSHTAGI**

**Criminal Case No. 41/2012**

ಪಿ.ಡಬ್ಲ್ಯು : 3 ಸಿ.ಡಬ್ಲ್ಯು : 3

| | | |
|---|---|---|
| ಸಾಕ್ಷಿದಾರನ ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ಲಿಂಗಪ್ಪ ಗುಳೇದಗುಡ್ಡ |
| ಪ್ರಾಯ | : | 50 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಹನಮಸಾಗರ |

ದಿನಾಂಕ 29.06.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ.

2) ಈಗ ನನಗೆ ತೋರಿಸಿದ ನಿಪಿ-24 ರಲ್ಲಿರುವ ಮೂರು ಸಹಿಗಳು ನನ್ನವು. ಸದರಿ ದಾಖಲೆಗೆ ದಿನಾಂಕಃ 29-06-2011 ರಂದು ಹನುಮಸಾಗರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಯು ಅಂಚೆ ಕಛೇರಿಯಲ್ಲಿನ ಉಳಿತಾಯ ಖಾತೆ, ನಿಶ್ಚಿತ ಖಾತೆ ಮತ್ತು ಪಿ.ಎಲ್.ಐ ಖಾತೆಯಲ್ಲಿನ ಹಣ ವ್ಯತ್ಯಾಸವಾದ ಕುರಿತು ದಾಖಲೆಗಳನ್ನು ಪರಿಶೀಲಿಸಿದ ಕುರಿತು ಜರುಗಿಸಿದ ಮಹಜರ ಆಗಿರುತ್ತದೆ. ಸದರಿ ಮಹಜರನ್ನು ಬೆಳಿಗ್ಗೆ 11-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಜರುಗಿಸಿರುತ್ತಾರೆ. ತದನಂತರ ನನ್ನ ಸಹಿಗಳನ್ನು ಮಹಜರಗೆ ಪಡೆದುಕೊಳ್ಳಲಾಗಿರುತ್ತದೆ. ನಿಪಿ-24 ರಲ್ಲಿರುವ ಸಾಕ್ಷಿಯು ಮೂರು ಸಹಿಗಳನ್ನು ಒಟ್ಟಾಗಿ ನಿಪಿ-24(ಬಿ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಸ್ವಾಧೀನಪಡಿಸಿಕೊಂಡ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ನಿಪಿ-1, 4, 5, 6, 7, 8, 10, 11, 12, 13, 14, 15, 16, 17, 18, 19 ಮತ್ತು 20 ದಾಖಲೆಗಳಾಗಿರುತ್ತವೆ. ನಿಪಿ-1 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ನಿಪಿ-4 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ನಿಪಿ-6 ಮತ್ತು 7 ರ ದಾಖಲೆಗಳಿಗೆ

ಅಂಟಿಸಿರುವ ಚೀಟಿಯಲ್ಲಿನ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು, ನಿಪಿ-8 ಮತ್ತು 10 ದಾಖಲೆಗೆ ಚೀಟಿಗೆ ಅಂಟಿಸಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-8 (ಎ) ಎಂದು, ನಿಪಿ-9 ಮತ್ತು 10 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು, ನಿಪಿ-11 ಮತ್ತು 12 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು, ನಿಪಿ-13 ಮತ್ತು 14 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು, ನಿಪಿ-15 ಮತ್ತು 16 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು, ನಿಪಿ-17 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು, ನಿಪಿ-18 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು, ನಿಪಿ-19 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು, ನಿಪಿ-20 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-20(ಎ) ಎಂದು, ನಿಪಿ-23 ದಾಖಲೆಯ ಚೀಟಿಯಲ್ಲಿರುವ ಸಹಿ ನನ್ನದು. ಸದರಿ ಚೀಟಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು</u>** : ಆರೋಪಿ ಪರ : ಶ್ರೀ ಬಿ.ಬಸವರಾಜ, ವಕೀಲರಿಂದ

1) ನಾನು ವಾಸವಾಗಿರುವ ಊರು ಹನುಮಸಾಗರ ಮತ್ತು ನಮ್ಮ ಊರಿನಲ್ಲಿ ಪ್ರತ್ಯೇಕ ಪೊಲೀಸ್ ಠಾಣೆ ಇದೆ. ನಮ್ಮ ಮನೆಯಿಂದ ಹನುಮಸಾಗರ ಪೊಲೀಸ್ ಠಾಣೆಗೆ ಸುಮಾರು ಒಂದು ಕಿ.ಮೀ. ಅಂತರವಿದೆ. ನನ್ನ ಮನೆಯು ಪೊಲೀಸ್ ಠಾಣೆಗೆ ಹತ್ತಿರವಿರುವುದರಿಂದ ಪೊಲೀಸರೊಂದಿಗೆ ಒಳ್ಳೆಯ ಒಡನಾಟವಿದ್ದು ಮತ್ತು ನನ್ನನ್ನು ಬಹಳಷ್ಟು ಪ್ರಕರಣಗಳಿಗೆ ಮಹಜರ ಸಾಕ್ಷಿಯಾಗಿ ಕರೆಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ಬೇರೆ ಪ್ರಕರಣಗಳ ಪಂಚನಾಮೆ ಸಲುವಾಗಿ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ಬಿ.ಎ. ಪದವಿಧರನಾಗಿರುತ್ತೇನೆ.

2) ನನ್ನನ್ನು ಪ್ರಸ್ತುತ ಪ್ರಕರಣಕ್ಕೆ ಪಂಚರರನ್ನಾಗಿ ಬರುವಂತೆ ಚಾಸಾ-1 ರವರು ಕರೆದಿರುತ್ತಾರೆ. ಸದರಿ ಚಾಸಾ-1 ರವರು ನಾನು ಅಂಚೆ ಇಲಾಖೆಗೆ ಹೋಗುತ್ತಿದ್ದ ಮೇರೆಗೆ ಪರಿಚಯವಾಗಿರುತ್ತಾರೆ. ನಿಪಿ-24 ಕ್ಕೆ ಸಹಿ ಮಾಡುವ ದಿನ ನಾನು ಹನುಮಸಾಗರದ ಅಂಚೆ ಕಛೇರಿಗೆ ಕೆಲಸದ ನಿಮಿತ್ಯ ಹೋಗಿದ್ದೆ ಮತ್ತು ಹಾಗೆ ಹೋಗಿದ್ದಾಗ ನನ್ನನ್ನು ಪಂಚರರನ್ನಾಗಿ ಬರುವಂತೆ ಕರೆದಿರುತ್ತಾರೆ. ಆ ರೀತಿ ದಿನಾಂಕ 29-06-2011 ರಂದು ಬೆಳಿಗ್ಗೆ 11-00 ಗಂಟೆಗೆ ಹನುಮಸಾಗರ ಅಂಚೆ ಕಛೇರಿಗೆ ಹೋಗಿರುತ್ತೇನೆ. ನಾನು ಮತ್ತು ಚಾಸಾ-2 ರವರು ಒಟ್ಟಿಗೆ ಹನುಮಸಾಗರ ಪೊಲೀಸ್ ಠಾಣೆಗೆ ಹೋಗಿರುತ್ತೇವೆ. ನಾನು ಮುಂಜಾನೆ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಚಾಸಾ-1 ಮತ್ತು 2 ರವರು ಮಾತ್ರ ಹಾಜರಿದ್ದರು. ನಮ್ಮನ್ನು ಹೊರತುಪಡಿಸಿ ಪೊಲೀಸ್ ಠಾಣೆಯಲ್ಲಿ ಬೇರೆ ಯಾರು ಇರಲಿಲ್ಲ. ನಾನು ಮಧ್ಯಾಹ್ನ 3-00 ಗಂಟೆಗೆ ಪೊಲೀಸ್ ಠಾಣೆಗೆ ಹೋದವನು ಸಂಜೆ 4-00 ಗಂಟೆಯವರೆಗೆ ಪೊಲೀಸ್ ಠಾಣೆಯಲ್ಲಿದ್ದೆ. ಸಂಜೆ 4-00 ಗಂಟೆಗೆ ನಾನು ಮತ್ತು ಚಾಸಾ-2 ರವರು ಪೊಲೀಸ್ ಠಾಣೆಯಿಂದ ಹೊರಗೆ ಬಂದಿರುತ್ತೇವೆ. ಸದರಿ ದಿನ ನಾನು ಎಷ್ಟು ಸಹಿಗಳನ್ನು ಮಾಡಿದ್ದೆ ಎಂದು ನನಗೆ ನೆನಪಿಲ್ಲ. ಸದರಿ ದಿನ ಯಾವೆಲ್ಲಾ ದಾಖಲೆಗಳಿಗೆ ಸಹಿ ಮಾಡಿದ್ದೆ ಎಂದು ನಿರ್ದಿಷ್ಟವಾಗಿ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ಪಿ.ಎಲ್.ಐ ಮತ್ತು ಇತರೆ ದಾಖಲೆಗಳು ಇದ್ದ ಮೇರೆಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ಒಟ್ಟು ಎಷ್ಟು ದಾಖಲೆಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಿನ ಪಿ.ಎಲ್.ಐ. ಉಳಿತಾಯ ಖಾತೆ ಮತ್ತು ಆರ್.ಡಿ. ಗೆ ಸಂಬಂಧಿಸಿದ ಪಾಸ ಪುಸ್ತಕಗಳು ಇದ್ದವು. ಆ ರೀತಿ ಎಷ್ಟು ಪಾಸ ಪುಸ್ತಕಗಳು ಮತ್ತು ರಜಿಸ್ಟ್ರರಗಳು ಇದ್ದವು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಆ ರೀತಿ ಉಳಿತಾಯ ಖಾತೆ, ಪಿ.ಎಲ್.ಐ , ಆರ್.ಪಿ.ಎಲ್.ಐ ಮತ್ತು ಆರ್.ಡಿ. ಯ ಎಷ್ಟು ಪಾಸಪುಸ್ತಕಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಉಳಿತಾಯ ಖಾತೆ, ಪಿ.ಎಲ್.ಐ , ಆರ್.ಪಿ.ಎಲ್.ಐ ಮತ್ತು ಆರ್.ಡಿ. ಪಾಸ ಪುಸ್ತಕಗಳಲ್ಲಿ ಯಾರ ಖಾತೆಯ ಹೆಸರುಗಳು ಇದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಿನ ಉಳಿತಾಯ ಖಾತೆ, ಪಿ.ಎಲ್.ಐ , ಆರ್.ಪಿ.ಎಲ್.ಐ ಮತ್ತು ಆರ್.ಡಿ. ಪಾಸ ಪುಸ್ತಕಗಳನ್ನು ಹೊರತುಪಡಿಸಿ ರೂ. 5, ಮತ್ತು 10 ಮುಖಬೆಲೆಯ ಅಂಚೆ ಸ್ಟ್ಯಾಂಪಗಳು ಇದ್ದವು. ಆ ರೀತಿ 5 ಮತ್ತು 10 ರೂ. ಮುಖಬೆಲೆಯ ಎಷ್ಟು ಸ್ಟ್ಯಾಂಪುಗಳಿದ್ದವು ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ದಿನ ಉಳಿತಾಯ ಖಾತೆ, ಪಿ.ಎಲ್.ಐ , ಆರ್.ಪಿ.ಎಲ್.ಐ ಮತ್ತು ಆರ್.ಡಿ. ಪಾಸಪುಸ್ತಕಗಳು ಹಾಗು ಅಂಚೆ ಸ್ಟ್ಯಾಂಪುಗಳನ್ನು ಹೊರತುಪಡಿಸಿ ಬೇರೆ ಯಾವೆಲ್ಲಾ

ದಾಖಲೆಗಳನ್ನು ಮಾಡಿದ್ದರು ಎಂದು ನನಗೆ ನೆನಪಿಲ್ಲ. ಸದರಿ ದಿನ ಅಂಚೆ ಸ್ಟ್ಯಾಂಪುಗಳ ಮೇಲೆ ನನ್ನ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ.

3) ನಾವು ಪೊಲೀಸ್ ಠಾಣೆಗೆ ಹೋದ ನಂತರ ಪಂಚನಾಮೆಯನ್ನು ಬರೆದಿರುತ್ತಾರೆ. ಸದರಿ ಪಂಚನಾಮೆಯು ಎಷ್ಟು ಪುಗಳನ್ನು ಒಳಗೊಂಡಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಪಂಚನಾಮೆಯಲ್ಲಿ ಉಳಿತಾಯ ಖಾತೆ, ಪಿ.ಎಲ್.ಐ, ಆರ್.ಪಿ.ಎಲ್.ಐ ಮತ್ತು ಆರ್.ಡಿ. ಖಾತೆಗಳ ಪಾಸಪುಸ್ತಕಗಳು ಮತ್ತು ಸ್ಟ್ಯಾಂಪುಗಳ ಬಗ್ಗೆ ಬರೆಯಲಾಗಿತ್ತು. ಸದರಿ ದಿನ ಯಾವ ಯಾವ ಖಾತೆಗಳಲ್ಲಿ ಎಷ್ಟು ಹಣ ವ್ಯತ್ಯಾಸವಾಗಿದೆ ಎಂದು ನನಗೆ ತಿಳಿಸಿರುತ್ತಾರೆ. ಆದರೆ ಈಗ ನನಗೆ ನೆನಪಿಲ್ಲ. ಆ ರೀತಿ ಎಷ್ಟು ಖಾತೆಗಳಲ್ಲಿ ವ್ಯತ್ಯಾಸವಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಿನ ದಾಖಲೆಗಳು ಚಾಸಾ-1 ರವರ ಬಳಿ ಇದ್ದವು. ಸದರಿ ಹಣದ ದುರುಪಯೋಗವು 2009 ರಿಂದ 2011 ನೇ ಸಾಲಿನವರೆಗೆ ಆಗಿರುತ್ತದೆ ಎಂದು ಹೇಳಿರುತ್ತಾರೆ. ಆ ರೀತಿ ಯಾವ ನಿರ್ದಿಷ್ಟ ದಿನಾಂಕಗಳಂದು ಹಣ ದುರುಪಯೋಗವಾಗಿತ್ತು ಎಂದು ನನಗೆ ಗೊತ್ತಿಲ್ಲ. ಆ ರೀತಿ ಒಟ್ಟು ಎಷ್ಟು ಮೊತ್ತ ದುರುಪಯೋಗವಾಗಿತ್ತು ಎಂದು ನನಗೆ ಗೊತ್ತಿಲ್ಲ.

4) ಸದರಿ ದಿನ ನಿಪಿ-24 ಕ್ಕೆ ನಾನು ಮತ್ತು ಚಾಸಾ-2 ರವರು ಸಹಿ ಮಾಡಿರುತ್ತೇವೆ. ಚಾಸಾ-2 ರವರು ನಿಪಿ-24 ಕ್ಕೆ ಎಷ್ಟು ಸಹಿಗಳನ್ನು ಮಾಡಿದ್ದರು ಎಂದು ನನಗೆ ಗೊತ್ತಿಲ್ಲ, ನನ್ನ ಸಮಕ್ಷಮ ಯಾವುದೇ ಮಹಜರನ್ನು ಜರುಗಿಸಿರುವುದಿಲ್ಲ ಮತ್ತು ಯಾವುದೇ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅಂಚೆ ಇಲಾಖೆಯವರು ಮತ್ತು ಪೊಲೀಸ್ ಠಾಣೆಯವರು ಪರಿಚಯವಿದ್ದ ಮೇರೆಗೆ ಮೊದಲೇ ಬರೆದಿಟ್ಟಿದ್ದ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-24 ರಡಿಯಲ್ಲಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ಹೇಳುವ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಸ್ತುತ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಮತ್ತು ನಿಪಿ24 ರಲ್ಲಿ ಕಾಣಿಸಿರುವ ವಿಚಾರಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ